MYSORE LEGISLATIVE ASSEMBLY

THIRTY-SIXTH DAY.

Monday, 20th April 1959.

The House met in the Assembly Hall, Vidhana Soudha, Bangalore, at One of the Clock.

MR. DEPUTY SPEAKER (SRI L. H. THIMMA BOVI, B.A.) in the Chair.

STARRED QUESTIONS

(to which oral answers were given.)

Courts without Magistrates or Munsiffs in the State.

*Q.—8. Sri K. P. REVANNA SIDDAPPA (Tiptur).—

Will the Government be pleased to state:—

(*a*) the number of Courts in the State to which neither a Magistrate nor a Munsiff has been posted as on 1st January 1959;

(*b*) the period during which these Courts remained without those officers?

A.—Sri B. D. JATTI (Chief Minister).—

(*a*) Three.

(*b*)—

1 III Joint Civil Judge (J.D.), Belgaum, from 22nd July 1958 till now.

2 IV Joint Civil Judge (J.D.), Belgaum, from 22nd July 1958 till now.

3 Joint Civil Judge (J.D.), Gadag, from 1st July 1958 till now.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ತಿಪಟೂರು ಕೋರ್ಟಿನಲ್ಲಿ ಎರಡೂವರೆ ತಿಂಗಳವರೆಗೆ ಮುನಿಸೀಫರು ಇಲ್ಲದೆ ಕೋರ್ಟಿನ ಬಾಗಿಲು ಹಾಕಿತ್ತು ಎನ್ನುವುದು ಸರಕಾರಕ್ಕೆ ಗೊತ್ತಿರಲಿಲ್ಲವೇ?

†ಶ್ರೀ ಬಿ.ಡಿ. ಜತ್ತಿ.—ಜನವರಿ ಒಂದನೆಯ ತಾರೀಕಿನಿಂದ ಯಾವುದೂ ಇರಲಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನಮ್ಮ ದೇಶದ ಕೋರ್ಟುಗಳಲ್ಲಿ ಎಷ್ಟು ಜನ ನ್ಯಾಯಾಧೀಶರುಗಳು ಜನವರಿ ಒಂದನೆಯ ತಾರೀಖಿನಿಂದ ಇರಲಿಲ್ಲ?

ಶ್ರೀ ಬಿ. ಡಿ. ಜತ್ತಿ.—ಜನವರಿ ತಿಂಗಳಿನವರೆಗೆ ಎಷ್ಟು ಕೋರ್ಟುಗಳಲ್ಲಿ ಮುನಿಸೀಫರು ಮ್ಯಾಜಿಸ್ಟ್ರೇಟು ಗಳು ಇರಲಿಲ್ಲ ಎನ್ನುವುದರ ಬಗ್ಗೆ ಮಾತ್ರ ಇಲ್ಲಿ ಉತ್ತರವನ್ನು ಕೊಡಲಾಗಿದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಹಾಗಾದರೆ ತಿಪಟೂರಿನಲ್ಲಿದ್ದ ಕೋರ್ಟನ್ನು ಎರಡೂವರೆ ತಿಂಗಳ ಕಾಲ ಮುಚ್ಚಿರಲಿಲ್ಲವೇ?

ಶ್ರೀ ಬಿ. ಡಿ. ಜತ್ತಿ.—ನನಗೆ ಅದು ಗೊತ್ತಿಲ್ಲ.

ಶ್ರೀ ಕೆ.ಪಿ. ರೇವಣ್ಣಸಿದ್ದಪ್ಪ.—ಸಾವಿರಾರು ಕೇಸುಗಳು ಇಂತಹ ಕೋರ್ಟಿನಲ್ಲಿದ್ದು ಅದು ಇತ್ಯರ್ಥವಾಗಲು ಸಾಧ್ಯವಾಗದಂತೆ ಈ ರೀತಿ ಕೋರ್ಟನ್ನು ಮುನಿಸೀಫರು ಇಲ್ಲ, ಮ್ಯಾಜಿಸ್ಟ್ರೇಟರು ಇಲ್ಲ ಎಂದು ಮುಚ್ಚಿದರೆ ಸರಿಯಾಗಿರುತ್ತದೆಯೆ?

ಶ್ರೀ ಬಿ. ಡಿ. ಜತ್ತಿ.—ಈರೀತಿ ಸಾವಿರಾರು ಏನೂ ಇಲ್ಲ. ಇದು ತಾತ್ಕಾಲಿಕವಾದ ಅರೇಂಜುಮೆಂಟು. ವೇಕೆನ್ಸೀಸು ಭರ್ತಿ ಆಗಿರಲಿಲ್ಲ. ಆಫೀಸರಿಲ್ಲದ್ದರಿಂದ ಪ್ರೋಸ್ಟ್ಪೋನು ಮಾಡಿದ್ದಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಒಬ್ಬ ಮ್ಯಾಜಿಸ್ಟ್ರೇಟರನ್ನು ಏಳೆಂಟು ತಿಂಗಳ ಮುಂಚೆಯೇ ಏಕೆ ಅಪಾಯಿಂಟುಮಾಡಬಾರದು?

ಶ್ರೀ ಬಿ.ಡಿ. ಜತ್ತಿ.—ಹೈಕೋರ್ಟಿನವರು ಕೋರ್ಟುಗಳಲ್ಲಿ ಏನು ಬೇಕು ಏನು ಇಲ್ಲ ಎನ್ನುವುದನ್ನೆಲ್ಲ ವಿಚಾರಮಾಡಿ ಕಳುಹಿಸುತ್ತಾರೆ. ಅವರ ಸಜೆಷನ್ನನ್ನು ಹಾಗೇ ಒಪ್ಪಿ ಕಳುಹಿಸಲಾಗುತ್ತದೆ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಇದರಲ್ಲಿ ಸರಕಾರದವರು ತಪ್ಪೋ ಅಥವಾ ಹೈಕೋರ್ಟಿನವರದು ತಪ್ಪೋ ಎಂದು ಹೇಗೆ ಹೇಳುವುದಕ್ಕೆ ಆಗುತ್ತದೆ?

ಶ್ರೀ ಬಿ. ಡಿ. ಜತ್ತಿ.—ಇದನ್ನೆಲ್ಲ ನೋಡಿಕೊಂಡು ಸರಿಯಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಲಾಗುತ್ತದೆ.

---

† Indicates that the remarks or speeches have not been revised by the member concerned